**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:11**

**ಸ್ಪೆಷಲ್ ಕೇಸ್ ಸಂಖ್ಯೆ: 510/23 ಸಿಡಬ್ಲ್ಯೂ:17**

**ಸಾಕ್ಷಿದಾರರ ಹೆಸರು** : ಪ್ರಶಾಂತ್

**ತಂದೆ ಹೆಸರು** : ನಾಗೇಶ

**ವಯಸ್ಸು** : 36

**ವೃತ್ತಿ** : ಚಾಲಕ

**ವಾಸ** : ಪಡುಕೋಣೆ ಗ್ರಾಮ

**ದಿನಾಂಕ: 28-04-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಈ ಪ್ರಕರಣದ ಆರೋಪಿತರ ಪರಿಚಯ ಇಲ್ಲಾ. ಚಾಸಾ.1 ರಿಂದ 5 ರವರ ಪರಿಚಯ ಇದೆ. ನನಗೆ ಚಾಸಾ.10 ಮತ್ತು 18 ರವರ ಪರಿಚಯ ಇಲ್ಲಾ. ಈ ಪ್ರಕರಣದ ಆರೋಪಿಗಳು ಚಾಸಾ.1 ರಿಂದ 4 ರವರಿಗೆ ಚಂದ್ರಿಕಾ ಬಾರ್ ಬಳಿ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ಚಂದ್ರಿಕಾ ಬಾರ್ ನ ಎದುರುಗಡೆ ಅಳವಡಿಸಿದ ಸಿಸಿ ಟಿವಿ ದೃಶ್ಯಾವಳಿಗಳನ್ನು ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದ್ರಿ ಮಹಜರನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-20 ಬಿ ಎಂದು ಗುರುತಿಸಲಾಯಿತು. ನಿಪಿ-20 ಕ್ಕೆ ನಾನು ಪೋಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಅದರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಡಿವಿಡಿಯನ್ನು ವಶಪಡಿಸಿಕೊಂಡಿಲ್ಲ. ಈಗ ನನಗೆ ತೋರಿಸಿದ ಎರಡು ಫೋಟೋಗಳಲ್ಲಿ ನಾನು ಇದ್ದಿರುತ್ತೇನೆ. ಸದ್ರಿ ಎರಡು ಫೋಟೋಗಳನ್ನು ಒಟ್ಟಾಗಿ ಈಗಾಗಲೇ ನಿಪಿ-21 ಎಂದು

ಗುರುತಿಸಲಾಗಿದೆ. ಸದ್ರಿ ಫೋಟೋಗಳನ್ನು ಎಲ್ಲಿ ಯಾವಾಗ ತೆಗೆಯಲಾಯಿತು ಮತ್ತು ಯಾವ ಕಾರಣಕ್ಕಾಗಿ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ</u> ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ**25-09-2023** ರಂದು ಗುಡ್ಡೆಯಂಗಡಿಯಲ್ಲಿರುವ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ತನಿಖಾಧಿಕಾರಿಯು ಸಿಸಿ ಟಿವಿ ಯನ್ನು ಪರಿಶೀಲಿಸಲು ಬಂದಾಗ ನಾನು ಸಹಾ ಹಾಜರಿದ್ದೆ ಎಂದರೆ ಸರಿ ಅಲ್ಲಾ. ಸದ್ರಿ ಹೋಟೇಲಿನ ಮಾಲೀಕರಾದ ಚಾಸಾ.**11** ಮತ್ತು ಸಿಸಿ ಟಿವಿ ತಾಂತ್ರಿಕ ತಜ್ಞರಾದ ಚಾಸಾ.**18** ನೇಯವರು ಹಾಜರಿದ್ದರು ಎಂದರೆ ಸರಿ ಅಲ್ಲಾ. ಸದ್ರಿ ಹೋಟೇಲಿಗೆ ಅಳವಡಿಸಿದ ಸಿಸಿ ಟಿವಿಯಲ್ಲಿ ದಿಃ**20-09-2023** ರ ರಾತ್ರಿಯ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಈ ಪ್ರಕರಣದ ಆರೋಪಿತರು ಚಾಸಾ.**1** ರಿಂದ **5** ರವರಿಗೆ ಹಲ್ಲೆ ಮಾಡುತ್ತಿರುವ ದೃಶ್ಯಾವಳಿಗಳು ಕಂಡು ಬಂದಿದೆ ಎಂದರೆ ಸರಿ ಅಲ್ಲಾ. ಸದ್ರಿ ದೃಶ್ಯಾವಳಿಯನ್ನು ಡಿವಿಡಿಗೆ ಕಾಪಿ ಮಾಡಿ ಸದ್ರಿ ಡಿವಿಡಿ ಯನ್ನು ನಿಪಿ-**20** ಮಹಜರು ಅಡಿಯಲ್ಲಿ ವಶಪಡಿಸಿಕೊಂಡು ಅದೇ ಸ್ತಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ ಅಲ್ಲಾ. ಹಾಗೂ ಅದೇ ಸಮಯ ನಿಪಿ-**21** ರಂತೆ ಫೋಟೋ ತೆಗೆಯಲಾಗಿರುತ್ತದೆ ಎಂದರೆ ಸರಿ ಅಲ್ಲಾ.

ಘಟನೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**<u>ಪಾಟೀ ಸವಾಲುಃ</u> 1 ರಿಂದ 7 ನೇ ಆರೋಪಿ ಪರ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ** ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**